KABI010016632022

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ (ಲೋಕಾಯುಕ್ತ)

ನ್ಯಾಯಾಧೀಶರ ನ್ಯಾಯಾಲಯ, ಬಳ್ಳಾರಿ.

-: ಉಪಸ್ಥಿತರು :-

ಶ್ರೀ ಸಿದ್ದಲಿಂಗ ಪ್ರಭು, ಬಿ. ಎಸ್‌ಸಿ., ಎಲ್‌ಎಲ್.ಬಿ.,

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ (ಲೋಕಾಯುಕ್ತ)

ನ್ಯಾಯಾಧೀಶರು, ಬಳ್ಳಾರಿ.

ದಿನಾಂಕ: 22 ನೇ ದಿವಸ ಜುಲೈ ಮಾಹೆಯ 2026 ನೇ ಇಸವಿಯಂದು.

ವಿಶೇಷ ಮೊಕದ್ದಮೆ ಸಂಖ್ಯೆ: 396/2022

ಫಿರ್ಯಾದುದಾರರು:-

ಕರ್ನಾಟಕ ಸರ್ಕಾರದ ಪ್ರತಿನಿಧಿತ್ವ
ಆರಕ್ಷಕ ಉಪಾಧೀಕ್ಷಕರು,
ಕರ್ನಾಟಕ ಲೋಕಾಯುಕ್ತ,
ಬಳ್ಳಾರಿ.

(ಪ್ರಾಜ್ಞ ವಿಶೇಷ ಸರಕಾರಿ ಅಭಿಯೋಜಕರ ಮೂಲಕ ಪ್ರತಿನಿಧಿಸಿರುತ್ತಾರೆ.)

-ವಿರುದ್ಧ-

ಆರೋಪಿತರು:-

ಡಾ. ಗೋಸ್‌ಬಾಳ್ ರಮೇಶ್ ಬಾಬು,
ತಂದೆ. ದಿವಂಗತ ಜಿ. ಹೇಮಾದ್ರಿ,
ವಯಸ್ಸುಃ 57 ವರ್ಷ, ವೃತ್ತಿಃ ಈ ಹಿಂದಿನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಡಿ.ಹೆಚ್.ಓ. ಕಛೇರಿ, ಜಿಲ್ಲಾ ಆಸ್ಪತ್ರೆ ಆವರಣ,
ಬಳ್ಳಾರಿ, ಹಾಲಿ ತಜ್ಞ ವೈದ್ಯಾಧಿಕಾರಿಗಳು,
ಜಿಲ್ಲಾ ಆಸ್ಪತ್ರೆ, ಬಳ್ಳಾರಿ,

ವಾಸಃ ಪ್ಲಾಟ್ ನಂ. 03,
ಹೊಸ ಮುನ್ಸಿಪಾಲಿಟಿ ವಾರ್ಡ್ ನಂ. 25,
ದಂಡು ಪ್ರದೇಶ, ವಿಜಯನಗರ ಕಾಲೋನಿ,
ಬಳ್ಳಾರಿ.

(ಶ್ರೀ ರಾಮಣ್ಣ ಕೆ., ವಕೀಲರ ಮೂಲಕ ಪ್ರತಿನಿಧಿಸಿರುತ್ತಾರೆ.)

-

ದಂಡ ಪ್ರಕ್ರಿಯಾ ಸಂಹಿತೆ, 1973 ರ ಕಲಂ 227 ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಈ ಅರ್ಜಿಯನ್ನು ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆ, 1973 ರ ಕಲಂ 227 ರಡಿಯಲ್ಲಿ ಸಲ್ಲಿಸಿ, ತನ್ನ ವಿರುದ್ಧ ಆಪಾದಿಸಲಾದ ಆಪಾದನೆಯಿಂದ ತನ್ನನ್ನು ಬಿಡುಗಡೆ ಮಾಡಬೇಕೆಂದು ಕೋರಿಕೊಂಡಿರುತ್ತಾನೆ.

2. ಅರ್ಜಿದಾರ ಆರೋಪಿ ದಿನಾಂಕ 10/10/2023 ರಂದು ಸಲ್ಲಿಸಿರುವ ತನ್ನ 16 ಪುಟಗಳ ಸುದೀರ್ಘ ಅರ್ಜಿಯಲ್ಲಿ ಎದುರುದಾರ ಲೋಕಾಯುಕ್ತ ಅಧಿಕಾರಿ ತಾವು ಸ್ವೀಕರಿಸಿದ ಮಾಹಿತಿ ಆಧಾರದ ಮೇಲೆ ತನಿಖಾ ಕ್ರಮ ಕೈಗೊಂಡು, ದಿನಾಂಕ 11/03/2015 ರಂದು ಮೂಲ ವರದಿಯನ್ನು ಸಲ್ಲಿಸಿದ್ದು, ನಂತರ ತನ್ನ ವರಿಷ್ಠಾಧಿಕಾರಿಯವರ ಅನುಮತಿಯನ್ನು ಕಾನೂನು ರೀತ್ಯಾ ಪಡೆದು ತನಿಖಾ ಕ್ರಮ ಕೈಗೊಂಡು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1985 ರ ಕಲಂ 13(1)(ಇ) ಮತ್ತು 13(2) ರ ಆಪಾದನೆಗಳು ಒಳಗೊಂಡಂತೆ ದೋಷಾರೋಪಣೆಯನ್ನು ಸಲ್ಲಿಸಿದ್ದಾರೆಂದು,

2.1. ತನಿಖಾ ಕಾಲದಲ್ಲಿ ಆರೋಪಿಯ ವಾಸದ ಮನೆ, ಕಛೇರಿ ಸ್ಥಳ ಮತ್ತು ಆರೋಪಿಯ ಪತ್ನಿಗೆ ಸೇರಿದ ಸಂಕೀರ್ಣ ಮಳಿಗೆ ಇವುಗಳನ್ನು ದಾಳಿ ಕಾರ್ಯಕ್ಕೆ ಒಳಪಡಿಸಿ,

₹1,06,671-00 ನಗದು ಹಣ, ₹23,14,832-00 ಬೆಲೆಬಾಳುವ ಚಿನ್ನದ ಆಭರಣಗಳು, ₹1,19,498-00 ಬೆಲೆ ಬಾಳುವ ಬೆಳ್ಳಿ ಆಭರಣಗಳನ್ನು ಎದುರುದಾರ ಅಧಿಕಾರಿ ವಶಕ್ಕೆ ಪಡೆದಿರುವುದಾಗಿ ತಾವು ಬರೆದ ಮಹಜರು ಕ್ರಮದಲ್ಲಿ ವಿವರಿಸಿರುತ್ತಾರೆಂದು,

2.2. ಆರೋಪಿ ತನಿಖಾ ಹಂತದಲ್ಲಿ ತನ್ನ ಅಂದಿನ ಸ್ವತ್ತುಗಳು ಮತ್ತು ಬಾಧ್ಯತೆ ಕುರಿತಂತೆ ನೀಡಿದ್ದ 16 ಪ್ರತ್ಯೇಕ ಹೇಳಿಕೆಗಳನ್ನು ತನಿಖಾಧಿಕಾರಿ ತನ್ನ ಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು,

2.3. ತನಿಖಾಧಿಕಾರಿ ಅರ್ಜಿದಾರ ಆರೋಪಿಯ ಪತ್ನಿಗೆ ಸಂಬಂಧಪಟ್ಟ ಸ್ಥಿರ ಸ್ವತ್ತುಗಳ ಬಾಡಿಗೆ ಆದಾಯ ಇತ್ಯಾದಿ ಕುರಿತಂತೆ ವಿವಿಧ ದಿನಾಂಕಗಳಂದು ತಿಳುವಳಿಕೆಗಳನ್ನು ಆರೋಪಿಗೆ ನೀಡಿದ್ದು, ಆರೋಪಿ ಸದರಿ ತಿಳುವಳಿಕೆಗಳಿಗೆ ಸೂಕ್ತ ವಿವರಣೆಗಳನ್ನು ಹೊಂದಿದ ಉತ್ತರಗಳನ್ನು ನೀಡಿದ್ದರೂ ಸಹ, ತನಿಖಾಧಿಕಾರಿ ಅವುಗಳನ್ನು ತನಿಖಾ ಹಂತದಲ್ಲಿ ತನ್ನ ಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು,

2.4. ಅರ್ಜಿದಾರ ಆರೋಪಿ, ಆತನ ಪತ್ನಿ ಮತ್ತು ಆತನ ತಂದೆ ಅವರವರ ಆದಾಯ-ವೆಚ್ಚಗಳ ಕುರಿತಂತೆ ಮಾಡಿರುವ ಪ್ರತ್ಯೇಕ ಘೋಷಣೆಗಳನ್ನು ಮತ್ತು ಆರೋಪಿಯ ತಾಯಿಯವರು ಹೊಂದಿದ್ದ ಕೃಷಿ ಆದಾಯದ ಘೋಷಣೆಗಳನ್ನು ತನಿಖಾಧಿಕಾರಿ ತನಿಖಾ ಕಾಲಕ್ಕೆ ಪರಿಗಣಿಸದೇ, ಸ್ವಾಭಾವಿಕ ನ್ಯಾಯದ ನಿಯಮಗಳನ್ನು ಉಲ್ಲಂಘಿಸಿರುತ್ತಾರೆಂದು,

2.5. ಆರೋಪಿ ಅರ್ಜಿದಾರರ ಪತ್ನಿ ಶ್ರೀಮತಿ ಆಶಾ, 2011-12 ರಿಂದ 2014-15 ಅವಧಿ ಕುರಿತಂತೆ ಸಲ್ಲಿಸಿರುವ ತಮ್ಮ ಆದಾಯ ತೆರಿಗೆ ಘೋಷಣೆಯಲ್ಲಿ ಘೋಷಿಸಿರುವ

₹23,63,140-00 ಆದಾಯದ ಮೊತ್ತ ಹಾಗೂ 2011-12 ರಿಂದ 2016-17 ಅವಧಿಯಲ್ಲಿ ತಮ್ಮ ಬಾಡಿಗೆ ಮೂಲದ ಆದಾಯ ₹49,61,684-00 ಎಂದು ಘೋಷಿಸಿದ್ದರೂ ಸಹ, ಸದರಿ ಘೋಷಣೆಗಳನ್ನು ತನಿಖಾಧಿಕಾರಿ ಬಾಡಿಗೆ ರಸೀದಿಗಳನ್ನು ಹಾಜರುಪಡಿಸಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ತಮ್ಮ ಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು,

2.6. ಅರ್ಜಿದಾರ ಆರೋಪಿಯ ತಾಯಿ ಸಾಕಷ್ಟು ಪ್ರಮಾಣದ ಕೃಷಿ ಭೂಮಿಗಳನ್ನು ಹೊಂದಿದ್ದು, ಅದರಿಂದ ಒಟ್ಟಾರೆ ₹38,25,000-00 ಪ್ರಮಾಣದ ಆದಾಯವನ್ನು ಹೊಂದಿದ್ದು, ಈ ಬಗ್ಗೆ ನೀಡಿರುವ ವಿವರಣೆಯನ್ನು ತನಿಖಾಧಿಕಾರಿ ಪರಿಗಣಿಸಿರುವುದಿಲ್ಲವೆಂದು,

2.7. ಅರ್ಜಿದಾರ ಆರೋಪಿ ತನಗೆ ಸಂಬಂಧಪಟ್ಟ ಮೂರು ವಿವಿಧ ಕಟ್ಟಡಗಳನ್ನು ನಿರ್ಮಿಸಬೇಕಾದರೆ ತಾನೇ ಖುದ್ದು ನಿಂತು, ತನ್ನ ಮುತುವರ್ಜಿಯಲ್ಲಿ ಮೂರೂ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದು, ಸದರಿ ಮೂರು ಕಟ್ಟಡಗಳ ನಿರ್ಮಾಣ ವೆಚ್ಚ ಕುರಿತಂತೆ ತನಿಖಾಧಿಕಾರಿ ತಪ್ಪು ಲೆಕ್ಕಾಚಾರವನ್ನು ಮಾಡಿದ್ದು, ತನಿಖಾಧಿಕಾರಿಯ ಲೆಕ್ಕಾಚಾರಕ್ಕೆ ಯಾವುದೇ ಆಧಾರ ಇರುವುದಿಲ್ಲ. ಅಲ್ಲದೇ, ಅರ್ಜಿದಾರ ಆರೋಪಿ ನಿರ್ಮಾಣ ವೆಚ್ಚದಲ್ಲಿ ಹೊಂದಬಹುದಾದಂತಹ ಶೇಕಡ 10 ರ ಪ್ರಮಾಣದ ಮೊತ್ತವನ್ನು ವ್ಯವಕಲನ ಮಾಡದೇ ನಿರ್ಮಾಣ ವೆಚ್ಚಗಳನ್ನು ತಪ್ಪಾಗಿ ತನಿಖಾಧಿಕಾರಿ ಗ್ರಹಿಸಿರುತ್ತಾರೆಂದು,

2.8. ಘನತವೆತ್ತ ಸರ್ವೋಚ್ಚ ನ್ಯಾಯಾಲಯ ಲಲಿತ್ ಕುಮಾರಿ ವಿರುದ್ಧ ಉತ್ತರ ಪ್ರದೇಶ ರಾಜ್ಯ ಮತ್ತು ಇತರರು ಪ್ರಕರಣದಲ್ಲಿ ಹಾಗೂ (1981) 3 ಎಸ್ ಸಿಸಿ 199 ರಲ್ಲಿ ವರದಿಯಾಗಿರುವ ಮಹಾರಾಷ್ಟ್ರ ರಾಜ್ಯ ವಿರುದ್ಧ ವಾಸುದೇವ ರಾಮಚಂದ್ರ ಕೈತಲ್ವಾರ್ ಪ್ರಕರಣದಲ್ಲಿ ನಿರೂಪಿಸಿರುವ ಕಾನೂನು ನಿಯಮಗಳನ್ನು ಗಾಳಿಗೆ ತೂರಿದ್ದಾರೆಂದು,

2.9. ಅರ್ಜಿದಾರ ಆರೋಪಿ ತನ್ನ ಮೂರು ಕಟ್ಟಡಗಳನ್ನು ನಿರ್ಮಿಸಬೇಕಾದರೆ ತನ್ನ ಇಲಾಖಾ ವರಿಷ್ಠರಿಂದ ಪಡೆದಂತಹ ಅಧಿಕೃತ ಅನುಮತಿಗಳು ಕುರಿತಂತೆ ನೀಡಲಾಗಿರುವ ದಾಖಲಾತಿ ವಿವರಣೆಗಳನ್ನು ಪರಿಗಣಿಸಿರುವುದಿಲ್ಲವೆಂದು,

2.10. ಅರ್ಜಿದಾರ ಆರೋಪಿ ತಾನು ಸಾಮಾನ್ಯ ಭವಿಷ್ಯ ನಿಧಿಯಿಂದ ಪಡೆದಿದ್ದ ಸಾಲಗಳ ಮತ್ತು ಅವುಗಳ ತೀರುವಳಿಗಳ ಬಗ್ಗೆ ಸಂಪೂರ್ಣ ವಿವರಣೆಯನ್ನು ನೀಡಿದ್ದರೂ ಸಹ, ಅಂತಹ ವಿವರಣೆಯನ್ನು ತನಿಖಾಧಿಕಾರಿ ತನಿಖಾ ಹಂತದಲ್ಲಿ ಪರಿಗಣಿಸಿರುವುದಿಲ್ಲವೆಂದು,

2.11. ಅರ್ಜಿದಾರ ಆರೋಪಿ ತಾನು ಕೆಜಿಐಡಿ ಸಂಸ್ಥೆಯಿಂದ ಪಡೆದಿದ್ದ ₹4,83,800-00 ರೂಪಾಯಿ ಮೊತ್ತದ ಸಾಲದ ಬಗ್ಗೆ ವಿವರಣೆಯನ್ನು ನೀಡಿದ್ದರೂ ಸಹ ತನಿಖಾಧಿಕಾರಿ ತನಿಖಾ ಹಂತದಲ್ಲಿ ಪರಿಗಣಿಸಿರುವುದಿಲ್ಲವೆಂದು,

3. ಪರಿಣಾಮ, ಖಂಡಿಕೆ 2.1 ರಿಂದ 2.11 ರವರೆವಿಗೆ ವಿವರಿಸಿರುವ ಕಾರಣಗಳಿಗೆ ಆರೋಪಿ ಅರ್ಜಿದಾರನ ವಿರುದ್ಧ ಆಪಾದಿಸಲಾಗಿರುವ ಆಪಾದನೆಗಳ ವಿಚಾರಣೆಗೆ ಯಾವುದೇ ಜರೂರತ್ತು/ಅಗತ್ಯತೆ ಇಲ್ಲದೇ ಇರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆ, 1973 ರ ಕಲಂ 227 ರಡಿಯಲ್ಲಿ ಲಭ್ಯವಿರುವ ಕಾನೂನಿನಂತೆ ಅರ್ಜಿದಾರ ಆರೋಪಿಯನ್ನು ಆಪಾದಿಸಲಾಗಿರುವ ಆಪಾದನೆಗಳಿಂದ ಮುಕ್ತಗೊಳಿಸಬೇಕೆಂದು ಅರ್ಜಿದಾರ ಕೋರಿದ್ದಾರೆ.

4. ಪರಿಗಣನೆಗೆ ಒಳಪಟ್ಟಿರುವ ಅರ್ಜಿದಾರರ ಅರ್ಜಿ ಕುರಿತಂತೆ ವಿಶೇಷ ಅಭಿಯೋಜಕರು ಸಹ ದಿನಾಂಕ 19/02/2023 ರಂದು ತಮ್ಮ ವಿವರವಾದ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನ ಸಂಕ್ಷಿಪ್ತ ಸಾರಾಂಶವೇನೆಂದರೆ,

4.1. ಅರ್ಜಿದಾರ ಆರೋಪಿ ತನ್ನ ಬಲ್ಲ ಆದಾಯಕ್ಕಿಂತಲೂ ಹೆಚ್ಚಿನ ಸ್ವತ್ತುಗಳನ್ನು ಹೊಂದಿದ್ದಾರೆಂದು ಲಭಿಸಿದ ಮಾಹಿತಿ ಆಧಾರದ ಮೇಲೆ ಅಂದಿನ ತನಿಖಾಧಿಕಾರಿ ತನ್ನ ವರಿಷ್ಠಾಧಿಕಾರಿಯ ಅನುಮತಿ ಪಡೆದು ತನಿಖೆಯನ್ನು ಕೈಗೊಂಡಿದ್ದು, ಅರ್ಜಿದಾರ ಆರೋಪಿ ತಾನು ಕೆಲಸಕ್ಕೆ ಸೇರ್ಪಡೆಯಾದಾಗಿನಿಂದ ದೋಷಾರೋಪಣೆ ಸಲ್ಲಿಸುವವೆವಿಗೂ ₹1,03,19,424-00 ರಷ್ಟು ಅಂದಾಜು ಆದಾಯವನ್ನು ಹೊಂದಿದ್ದು, ₹38,15,539-00 ರಷ್ಟು ಖರ್ಚು-ವೆಚ್ಚ ಮಾಡಿದ್ದು, ಆತನ ಸ್ಥಿರಾಸ್ತಿಗಳ ಮೌಲ್ಯ ₹1,61,16,259-00 ಪ್ರಮಾಣದ್ದಾಗಿದ್ದು ಆರೋಪಿ ಅರ್ಜಿದಾರ ಅಸಮತೋಲನ ಗಳಿಕೆ ₹96,12,374-00 ಆಗಿದ್ದು ಪ್ರಕರಣವನ್ನು ದಾಖಲಿಸಿ ತನ್ನ ಮೇಲಾಧಿಕಾರಿಯ ಅನುಮತಿ ಕೋರುವ ಅಗತ್ಯತೆ ತನಿಖಾಧಿಕಾರಿಗೆ ಒದಗಿಬಂತೆಂದು, ನಂತರ ಕಾನೂನುಬದ್ಧ ತನಿಖಾ ಕ್ರಮವನ್ನು ಕೈಗೊಂಡಿದ್ದು, ಅಂತಿಮ ದೋಷಾರೋಪಣೆಯನ್ನು ಸಲ್ಲಿಸಲಾಗಿದೆ ಎಂದು,

4.2. ತನಿಖಾ ಹಂತದಲ್ಲಿ ಅರ್ಜಿದಾರ ಆರೋಪಿ ಸಲ್ಲಿಸಿದ್ದ ತನ್ನ ಮತ್ತು ತನ್ನ ಪತ್ನಿಯ ಆದಾಯ ತೆರಿಗೆ ರಿಟರ್ನ್ಸ್ ಗಳನ್ನು ಹಾಗೂ ಅರ್ಜಿದಾರ ಆರೋಪಿ ಸಲ್ಲಿಸಿದ್ದ ಪ್ರತ್ಯೇಕ ವಿವರಣೆಗಳನ್ನು ಸ್ವೀಕರಿಸದಲ್ಲದೇ, ಅವುಗಳನ್ನು ಪರಿಗಣಿಸಲಾಗಿದೆ ಎಂದು,

4.3. ಅರ್ಜಿದಾರ ಆರೋಪಿಯ ಪತ್ನಿಯ ಹೆಸರಿನಲ್ಲಿ ನೋಂದಣಿಯಾಗಿರುವ ಬಾಡಿಗೆ ಕರಾರುಗಳಲ್ಲಿ ನಮೂದಿಸಿದ ಬಾಡಿಗೆಗಳ ಮೊತ್ತವನ್ನು ಆರೋಪಿಯ ಪತ್ನಿ ತನ್ನ ಆದಾಯ ತೆರಿಗೆಯಲ್ಲಿ ಘೋಷಿಸಿಕೊಳ್ಳದೇ, ಬಾಡಿಗೆ ಕರಾರುಗಳಲ್ಲಿ ನಮೂದಿಸಿದ ಬಾಡಿಗೆ ಮೊತ್ತಕ್ಕಿಂತ ಕಡಿಮೆ ಬಾಡಿಗೆ ಆದಾಯವನ್ನು ಘೋಷಿಸಿಕೊಂಡಿರುವುದರಿಂದ ಹಾಗೂ ಲೋಕಾಯುಕ್ತ ದಾಳಿಯ ನಂತರ ಅರ್ಜಿದಾರ ಆರೋಪಿಯ ಪತ್ನಿ ತನ್ನ ಬಾಡಿಗೆ ರೂಪದ

ಆದಾಯವನ್ನು ಘೋಷಿಸಿಕೊಂಡಿರುವುದರಿಂದ, ಈ ಬಗೆಗಿನ ಆದಾಯ ತೆರಿಗೆ ಘೋಷಣೆಗಳನ್ನು ಪರಿಗಣಿಸಿರುವುದಿಲ್ಲವೆಂದು,

4.4. ಅರ್ಜಿದಾರ ಆರೋಪಿ ತನಿಖಾ ಕಾಲದಲ್ಲಿ ನೀಡಿದ ಮಾಹಿತಿ ವಿವರಣೆಯಲ್ಲಿ ಉಲ್ಲೇಖಿಸಿಲಾಗಿದ್ದ ಜಮೀನುಗಳು ಖುಷ್ಕಿ ಜಮೀನುಗಳಾಗಿದ್ದು, ಅವುಗಳು ಮಳೆ ಆಧಾರಿತ ಜಮೀನುಗಳಾಗಿವೆ. ಅಲ್ಲದೇ, ಅಂದಾಜು 8.86 ಎಕರೆ ವಿಸ್ತೀರ್ಣದ ಜಮೀನುಗಳನ್ನು 2004 ರಲ್ಲಿ ಮಾರಾಟ ಮಾಡಿರುವ ಸಂಗತಿ ಸಹ ತನಿಖಾ ಕಾಲದಲ್ಲಿ ಕಂಡುಬಂದಿರುತ್ತದೆ. ಅರ್ಜಿದಾರ ಆರೋಪಿ ತಾನು ಕೃಷಿ ಉತ್ಪನ್ನಗಳಿಂದ ಒಟ್ಟಾರೆ ₹38,25,000-00 ಮೊತ್ತದ ಆದಾಯವನ್ನು ಗಳಿಸಿರುವುದಾಗಿ ತನ್ನ ವಿವರಣೆಯಲ್ಲಿ ಬಣ್ಣಿಸಿದ್ದಾರೆ, ಆದರೆ ಸದರಿ ಪ್ರಮಾಣದ ಮೊತ್ತವನ್ನು ಪುಷ್ಠೀಕರಿಸುವಂತೆ ಅರ್ಜಿದಾರ ಆರೋಪಿ ಸಮರ್ಪಕ ದಾಖಲಾತಿಗಳನ್ನು ನೀಡಿರುವುದಿಲ್ಲ. ಅಲ್ಲದೇ ಸದರಿ ಕೃಷಿ ಭೂಮಿಗಳು ಕುರಿತಂತೆ ಮತ್ತು ಅವುಗಳಲ್ಲಿನ ಆದಾಯ ಕುರಿತಂತೆ ಅರ್ಜಿದಾರ ಆರೋಪಿ ತಮ್ಮ ಎಪಿಆರ್ ಆದಾಯ ತೆರಿಗೆಯಲ್ಲಿ ಘೋಷಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಗೆ ಅರ್ಜಿದಾರ ಆರೋಪಿ ನೀಡಿದ ಕೃಷಿ ಉತ್ಪನ್ನಗಳ ಮೂಲಗಳನ್ನು ಪರಿಗಣಿಸಿರುವುದಿಲ್ಲವೆಂದು,

4.5. ವಿವಿಧ ಕಟ್ಟಡಗಳ ನಿರ್ಮಾಣ ಕುರಿತಂತೆ ಅರ್ಜಿದಾರ ಆರೋಪಿ ವಿವರಣೆ ನೀಡುತ್ತಾ, ಸದರಿ ಮೂರು ಕಟ್ಟಡಗಳ ನಿರ್ಮಿಸುವಿಕೆ ತನ್ನ ಮೇಲ್ವಿಚಾರಣೆಯಲ್ಲಿ ಜರುಗಿರುವುದಾಗಿ, ಆದ್ದರಿಂದ ತಾನು ಶೇಕಡಾ 15 ರಷ್ಟು ನಿರ್ಮಾಣ ವೆಚ್ಚದಲ್ಲಿ ವ್ಯವಕಲನಕ್ಕೆ ಅರ್ಹನಾಗಿರುವುದಾಗಿ ನುಡಿದಿದ್ದಾರೆ. ಆದರೆ, ತಾವೇ ಖುದ್ದು ನಿರ್ಮಿಸಿದ ಬಾಬ್ತು, ತಮ್ಮ ತಾಂತ್ರಿಕ ನೈಪುಣ್ಯದ ಬಾಬ್ತು ಅವಶ್ಯ ಮತ್ತು ಅಗತ್ಯ ದಾಖಲೆಗಳನ್ನು ಅರ್ಜಿದಾರ ಆರೋಪಿ

ನೀಡಿರುವುದಿಲ್ಲ. ಅಲ್ಲದೇ, ತಾನು ಪಡೆದಿರುವ ಪರವಾನಿಗೆ ಮನೆ ಕಟ್ಟಡಗಳ ನಿರ್ಮಾಣ ಕುರಿತಂತೆ ನೀಡುವ ಪರವಾನಿಗೆಯಾಗಿದ್ದು, ವಿವಾದಸ್ಪದ ಕಟ್ಟಡಗಳು ವಾಣಿಜ್ಯ ಸಂಕೀರ್ಣ ಕಟ್ಟಡಗಳಾಗಿವೆ. ಪರಿಣಾಮ ಆರೋಪಿ ಅರ್ಜಿದಾರರ ವಿವರಣೆಯನ್ನು ಪರಿಗಣಿಸಲಾಗಿಲ್ಲ.

4.6. ಅರ್ಜಿದಾರ ಆರೋಪಿ ಯಾವುದೇ ಆಸ್ತಿಗಳನ್ನು ಖರೀದಿಸಲು, ಮಾರಾಟ ಮಾಡಲು, ಕಟ್ಟಡ ನಿರ್ಮಿಸಲು ಇಲಾಖಾ ವತಿಯಿಂದ ಪರವಾನಿಗೆ ಪಡೆದುಕೊಂಡಿಲ್ಲ ಎಂಬ ಸಂಗತಿಗಳು ಆಪಾದಿತ ಅರ್ಜಿದಾರರ ಸಕ್ಷಮ ಪ್ರಾಧಿಕಾರದವರು ನೀಡಿದ ಮಾಹಿತಿಯಿಂದ ಸಾಬೀತಾಗಿರುತ್ತದೆಂದು ನುಡಿದಿರುವುದಲ್ಲದೇ, ಈ ಕೆಳಕಂಡ ಅಸಮತೋಲನ ಆಸ್ತಿಯ ವಿವರವನ್ನು ತನಿಖಾಧಿಕಾರಿ ತಮ್ಮ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ.

ಕ್ರಮ ಸಂಖ್ಯೆ	ವಿವರ	ಮೊತ್ತ
1.	ಚೆಕ್ ಪೂರ್ವ ಅವಧಿಯ ಚರಾ/ಸ್ಥಿರಾಸ್ತಿ	₹14,80,148/-
2.	ಚೆಕ್ ಅವಧಿಯ ಅಂತ್ಯಕ್ಕೆ ಹೊಂದಿರುವ ಸ್ಥಿರ ಮತ್ತು ಚರ ಆಸ್ತಿಗಳು	₹2,27,90,554/-
3.	ಚೆಕ್ ಅವಧಿಯಲ್ಲಿ ಹೊಂದಿರುವ ಸ್ಥಿರ ಮತ್ತು ಚರಾಸ್ತಿಗಳು (2-1)	₹2,13,10,406/-
4.	ಚೆಕ್ ಅವಧಿಯ ವೆಚ್ಚಗಳು	₹1,23,43,771/-
5.	ಚೆಕ್ ಅವಧಿಯ ಆಸ್ತಿ ಮತ್ತು ವೆಚ್ಚಗಳ ಒಟ್ಟು ಮೊತ್ತ (3+4)	₹3,36,54,177/-
6.	ಚೆಕ್ ಅವಧಿಯ ಆದಾಯ	₹2,45,86,798/-
7.	ಅಸಮತೋಲ ಆಸ್ತಿಯ ಮೌಲ್ಯ {5-(3+4)}	₹90,67,379/-
	ಶೇಡಕವಾರು ಅಸಮತೋಲನ ಆಸ್ತಿ {(6/5) X 100}	36.87%

ಅಲ್ಲದೇ, ಅರ್ಜಿದಾರ ಆರೋಪಿ ದಂಡ ಪ್ರಕ್ರಿಯಾ ಸಂಹಿತೆ, 1973 ರ ಕಲಂ 227 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ವಜಾಮಾಡಬೇಕೆಂದು ಕೋರಿದ್ದಾರೆ.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆ: -

1) ಪರಿಗಣಿಸಲ್ಪಟ್ಟಿರುವ ಅರ್ಜಿಯ ಕಾರಣಗಳಿಗೆ ಆರೋಪಿ ಅರ್ಜಿದಾರನ ವಿರುದ್ಧ ವಿಶೇಷ ಮೊಕದ್ದಮೆ ಸಂಖ್ಯೆಃ 396/2022 ರಲ್ಲಿ ಈ ನ್ಯಾಯಾಲಯ ವಿಚಾರಣೆ ಕೈಗೊಳ್ಳಲು/ಮುಂದುವರೆಸಲು ಸಮರ್ಪಕ ಕಾರಣಗಳು ಇರುವುದಿಲ್ಲ ಎಂದು ಸಾಬೀತುಪಡಿಸಲಾಗಿದೆಯೇ?

2) ಹಾಗಿದ್ದರೆ, ಯಾವ ಆದೇಶ?

6. ಉಭಯ ಪಕ್ಷಗಾರರ ವಾದ-ವಿವಾದಗಳನ್ನು ಆಲಿಸಲಾಗಿದೆ ಮತ್ತು ಲಭ್ಯವಿರುವ ದೋಷಾರೋಪಣೆ, ಅದಕ್ಕೆ ಲಗತ್ತಿಸಿರುವ ದಾಖಲಾತಿಗಳನ್ನು ಪರಿಗಣಿಸಲಾಗಿದ್ದು, ಈ ಮೇಲಿನ ಅಂಶಗಳಿಗೆ ಈ ನ್ಯಾಯಾಲಯವು ನೀಡಿದ ಕಾರಣಗಳು ಈ ಕೆಳಕಾಣಿಸಿದಂತಿವೆಃ-

ಕಾರಣಗಳು

6.1. ಅರ್ಜಿದಾರ ಆರೋಪಿ ಮತ್ತು ಆತನ ಕುಟುಂಬಕ್ಕೆ ಸೇರಿದ ಕೃಷಿ ಸ್ವತ್ತುಗಳು ಖುಷ್ಕಿ ಜಮೀನುಗಳಾಗಿದ್ದು, ಅವುಗಳು ಮಳೆ ಆಧಾರಿತ ಜಮೀನುಗಳು ಮತ್ತು ವರ್ಷಕ್ಕೆ ಒಮ್ಮೆ ಮಾತ್ರ ಕೃಷಿ ಉತ್ಪನ್ನಗಳನ್ನು ಬೆಳೆಯಬಹುದಾದಂತಹ ಜಮೀನುಗಳಾಗಿವೆ ಎಂಬ ಎದುರುದಾರರ ವಾದವನ್ನು ಅರ್ಜಿದಾರ ಆರೋಪಿ ಅಲ್ಲಗಳೆದಿರುವುದಿಲ್ಲ. ಆದ್ದರಿಂದ, ವಿವಾದಸ್ಪದ ಸಮಯದಲ್ಲಿ ಅರ್ಜಿದಾರ ಆರೋಪಿ ಮತ್ತು ಆತನ ಕುಟುಂಬದವರು ಹೇಗೆ ರೂಪಾಯಿ 38

ಲಕ್ಷಗಳಿಗೂ ಮಿಗಿಲಾಗಿ ಕೃಷಿ ಆದಾಯವನ್ನು ಹೊಂದಿದ್ದರು ಎಂಬ ಸಂಗತಿಯನ್ನು ತಿಳಿದುಕೊಳ್ಳಲು ವಿಚಾರಣೆಯ ಅಗತ್ಯತೆ ಇರುತ್ತದೆ.

6.2. ಅರ್ಜಿದಾರ ಆರೋಪಿಯ ಪತ್ನಿ ತಮ್ಮ ಆದಾಯ ತೆರಿಗೆಯಲ್ಲಿ ಘೋಷಿಸಿರುವ ತಮ್ಮ ಬಾಡಿಗೆ ಆದಾಯದ ಮೊತ್ತವೂ, ಅವರ ಹೆಸರಿನಲ್ಲೇ ಬರೆಯಲಾಗಿರುವ ಬಾಡಿಗೆ ಕರಾರಿನಲ್ಲಿ ನಮೂದಿಸಿದ ಬಾಡಿಗೆ ಮೊತ್ತಕ್ಕೆ ಸಮನಾಗಿದೆಯೇ ಅಥವಾ ಇಲ್ಲವೇ, ಎಂಬ ಸಂಗತಿಯನ್ನು ತಿಳಿದುಕೊಳ್ಳಲು ವಿಚಾರಣೆಯ ಅಗತ್ಯತೆ ಇರುತ್ತದೆ.

6.3. ಅರ್ಜಿದಾರ ಆರೋಪಿ ತಾನು ವಾಣಿಜ್ಯ ಮಳಿಗೆಗಳ ಕಟ್ಟಡವನ್ನು ನಿರ್ಮಿಸಲು ಸೂಕ್ತ ಪರವಾನಿಗೆ/ಅನುಮತಿಯನ್ನು ತನ್ನ ಇಲಾಖೆಯಿಂದ ಪಡೆದಿದ್ದರೇ ಅಥವಾ ಇಲ್ಲವೇ, ಎಂಬ ಸಂಗತಿಯನ್ನು ತಿಳಿದುಕೊಳ್ಳಲು ವಿಚಾರಣೆಯ ಅಗತ್ಯತೆ ಇರುತ್ತದೆ.

6.4. ಅರ್ಜಿದಾರ ಆರೋಪಿ ತಾನು ಒಪ್ಪಿಕೊಂಡ ವಾಣಿಜ್ಯ ಮಳಿಗೆ ಕಟ್ಟಡಗಳ ನಿರ್ಮಾಣದ ವೆಚ್ಚದಲ್ಲಿ ಶೇಕಡಾ 15 ರಷ್ಟು ಪ್ರಮಾಣದ ವೆಚ್ಚವು ಕಡಿತವನ್ನು ಹೊಂದಲು ಅರ್ಹನೇ ಅಥವಾ ಅಲ್ಲವೇ, ಎಂಬ ಸಂಗತಿಯನ್ನು ಮನಗಾಣಲು ವಿಚಾರಣೆಯ ಅಗತ್ಯ ಇರುತ್ತದೆ.

6.5. ಆದ್ದರಿಂದ, ಈ ಮೇಲೆ ಖಂಡಿಕೆ 6.1 ರಿಂದ 6.4 ರವರೆಗೆ ಹೇಳಿದ ಕಾರಣಗಳಿಗೆ ಅರ್ಜಿದಾರ ಆರೋಪಿಯ ವಿರುದ್ಧ ವಿಶೇಷ ಮೊಕದ್ದಮೆ ಸಂಖ್ಯೆಃ 396/2022 ರಲ್ಲಿ ವಿಚಾರಣೆಯನ್ನು ಮುಂದುವರೆಸಲು ಸಮರ್ಪಕ ಕಾರಣಗಳಿದ್ದು, ಅರ್ಜಿದಾರ ಆರೋಪಿಯನ್ನು ಆರೋಪಿಸಲ್ಪಟ್ಟ ಆಪಾದನೆಗಳಿಂದ ಮುಕ್ತಗೊಳಿಸಲು ಅಸಾಧ್ಯವೆಂದು

ನಿರ್ಣಯಿಸಿ, ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಾ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆಃ

ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ, 1973 ರ ಕಲಂ 227 ರಡಿಯಲ್ಲಿ ಆರೋಪಿತನು ದಿನಾಂಕ 10/10/2023 ರಂದು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

(ಈ ಮೇಲಿನ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರರು ಗ್ರೇಡ್- I ಇವರಿಗೆ ನೇರವಾಗಿ ಗಣಕಯಂತ್ರ ಪರದೆ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ಅದನ್ನು ತಿದ್ದುಪಡಿ ಮಾಡಿ, ರುಜು ಮಾಡಿದ ನಂತರ ದಿನಾಂಕ 22 **ನೇ ದಿವಸ ಜುಲೈ ಮಾಹೆಯ 2026** ನೇ ಇಸವಿಯಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಸಿದ್ದಲಿಂಗ ಪ್ರಭು)
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,
ಬಳ್ಳಾರಿ.

--